ಧ್ವನಿ ಹೇಗೆ ಭಿನ್ನವಾಗಿದೆ ಎಂದು ಗಮನಿಸುವುದು, ಚಿಟ್ಟೆಯ ಹಿಂದೆ ಓಡುವುದು, ಗಿಡ ಮರಗಳ ವೈವಿಧ್ಯ ಗಮನಿಸುವುದು – ಇದೆಲ್ಲ ಶಿಕ್ಷಣದ ಉತ್ತಮ ವಿಧಾನ ಎಂದು ಅವರು ಭಾವಿಸಿದ್ದರು. ಆಗ ಬೇರೆಯವರೆಲ್ಲ, 'ಇದೇನು ಮಕ್ಕಳನ್ನು ಶಾಲೆಗೆ ಕಳಿಸದೇ ಹೀಗೆ ಸುಮ್ಮನೇ ಆಟವಾಡಲು ಬಿಟ್ಟಿದ್ದಾರೆ' ಎಂದು ಅಚ್ಚರಿಪಡುತ್ತಿದ್ದರು. ಆದರೆ, ಪ್ರಕೃತಿಯ ಕುರಿತು ನನಗೆ ದೊರೆತ ಆ ಶಿಕ್ಷಣವೇ ನನ್ನೊಳಗೆ ಅಡಗಿದ್ದ ಕಲಾತ್ಮಕತೆಗೆ ನೀರೆರೆಯಿತು ಎನಿಸುತ್ತದೆ.

ನಮ್ಮ ಮನೆಯ ಸುತ್ತ ಇರುವ ಗುಡ್ಡಬೆಟ್ಟಗಳಲ್ಲಿ ಅಲೆದಾಡುವುದಷ್ಟೇ ನಮ್ಮ ಶಿಕ್ಷಣವಾಗಿರಲಿಲ್ಲ. ಮನೆಯಲ್ಲಿ ಅಪ್ಪ ಅತ್ಯುತ್ತಮವಾದ ಗ್ರಂಥಾಲಯ ರೂಪಿಸಿದ್ದರು. ಅಲ್ಲಿ ಚಿತ್ರಗಳಿರುವ ಎನ್‌ಸೈಕ್ಲೋಪೀಡಿಯಾ, ವಿಜ್ಞಾನದ ಪುಸ್ತಕಗಳು, ರೀಡರ್ಸ್ ಡೈಜೆಸ್ಟ್, ನ್ಯಾಷನಲ್ ಜಿಯೋಗ್ರಫಿ ನಿಯತ ಕಾಲಿಕ ಎಲ್ಲವನ್ನೂ ಅಪ್ಪ ತರಿಸಿ, ನಮಗೆ ಓದಲು ಹೇಳಿಕೊಡುತ್ತಿದ್ದರು. ನಮಗೆಲ್ಲ ಕಾಗದದ ಹಾಳೆ, ಬಣ್ಣ-ಕುಂಚ ಕೊಟ್ಟು, 'ನಿಮಗೆ ತೋಚಿದ್ದನ್ನು ಗೀಚಿ ಮಕ್ಕಳೇ' ಎಂದು ಹೇಳಿ ನಮ್ಮನ್ನು ನಮ್ಮ ಪಾಡಿಗೆ ಬಿಟ್ಟುಬಿಡುತ್ತಿದ್ದರು. ಪ್ರತೀದಿನ ರಾತ್ರಿ ಒಂದು ಹೊಸ ಕಥೆಯನ್ನು ಅವರೇ ಕಟ್ಟಿ ನಮಗೆಲ್ಲ ಹೇಳುತ್ತಿದ್ದರು. ಪ್ರಕೃತಿಯ ಜೊತೆಗೆ ಇರುವುದರಿಂದ ಮನುಷ್ಯನ ಮನಸ್ಸಿನಲ್ಲಿ ಸಂವೇದನೆ ಅರಳುತ್ತದೆ. ಮರ ಹತ್ತುವುದು, ಮರದಲ್ಲೇ ಮಾವಿನ ಹಣ್ಣು ಕೊಯ್ದು ತಿನ್ನುವುದು, ಅಲ್ಲಿ ದಿನವೂ ಬರುವ ಅಳಿಲು, ಚಿಟ್ಟೆ, ಕೋಳಿ, ಗಿಳಿ ಮುಂತಾದ ಪಕ್ಷಿಗಳ ಒಡನಾಟ... ಎಲ್ಲವೂ ನನಗೆ ನೆನಪಿದೆ. ಅವೆಲ್ಲ ಪ್ರಿಯವಾದ ಕ್ಷಣಗಳು.

ನಾನು ಔಪಚಾರಿಕವಾಗಿ ಆರನೇ ತರಗತಿಗೆ ಶಾಲೆಗೆ ಸೇರಿದ್ದು. ಅದೂ ಕಡ್ಡಾಯವಾಗಿ ಮಾತೃಭಾಷೆಯಲ್ಲಿಯೇ ಕಲಿಯಬೇಕು ಎಂದು, ಅಪ್ಪ ನಮ್ಮನ್ನು ಪುತ್ತೂರಿನ ತಾಲ್ಲೂಕು ಬೋರ್ಡ್ ಹೈಸ್ಕೂಲಿಗೆ ಸೇರಿಸಿದ್ದರು. ಕನ್ನಡದ ಬಲವಾದ ತಳಪಾಯ ಇದ್ದುದರಿಂದ ನನಗೆ ನಂತರ ಇತರ ಭಾಷೆಗಳನ್ನು ಚೆನ್ನಾಗಿ ಕಲಿಯುವುದು ಸಾಧ್ಯವಾಯಿತು. ಬಾಲ್ಯದಿಂದಲೂ ನನಗೆ ನೃತ್ಯ ಸಂಗೀತವೆಂದರೆ ಬಹಳ ಇಷ್ಟವಿತ್ತು. ಆಗೆಲ್ಲ ಅಪ್ಪ, ನೃತ್ಯವನ್ನು ತಾವೇ ಕೊರಿಯೊಗ್ರಫಿ ಮಾಡಿ ಮಕ್ಕಳಿಗೆ ಹೇಳಿಕೊಡುತ್ತಿದ್ದರು.



'ಋತುಯಾತ್ರೆ' ಎಂಬ ಗೀತನಾಟಕದಲ್ಲಿ, ಬಹುಶಃ ನಾನು ಹೈಸ್ಕೂಲಿನಲ್ಲಿದ್ದಾಗ, ನನಗೆ ಅಪ್ಪ ಚಿಕ್ಕದೊಂದು ಪಾತ್ರ ಕೊಟ್ಟಿದ್ದರು. ದುಂಬಿಯ ಪಾತ್ರ. ಆ ಮೊದಲ ಪಾತ್ರ ನನಗೆ ಸರಿಯಾಗಿ ನೆನಪಿದೆ.

◆ **ಬಾಲ್ಯದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಅಪ್ಪನ ಮಡಿಲಿನಲ್ಲಿಯೇ ನೀವು ಪಡೆದುದರಿಂದ ಅವರ ಪ್ರಭಾವ ನಿಮ್ಮ ಮೇಲೆ ಗಾಢವಾಗಿದೆ...**

ಹೌದು. ಕೊನೆಯ ಮಗಳಾದ್ದರಿಂದ ಅಪ್ಪನಿಗೆ ನನ್ನ ಮೇಲೆ ಅಕ್ಕರೆ ಜಾಸ್ತಿಯಿದ್ದಿರಬೇಕು. ಮನೆಯಲ್ಲಿ ಅಪ್ಪ ನಮಗೆಲ್ಲ ಅಮ್ಮನೇ ಆಗಿದ್ದರು. ಹುಷಾರಿಲ್ಲದೇ ಮಲಗಿದರೆ ಅವರೇ ನಮ್ಮನ್ನು ಹಿಡಿದು ಬಾಯಿಗೆ ಔಷಧಿ ಹಾಕುತ್ತಿದ್ದರು. ಬೇಗನೇ ಸಿಟ್ಟು ಬರುತ್ತಿತ್ತಾದರೂ, ನಮ್ಮ ಅನಿಸಿಕೆಗಳನ್ನು ಹೇಳಲು ನಮಗೆ ಅವಕಾಶವಿತ್ತು. ಅಪ್ಪ ಸದಾ ಸೃಜನಶೀಲವಾಗಿ ಯೋಚಿಸುತ್ತಿದ್ದರು. ಪ್ರತಿದಿನವೂ ಹೊಸದನ್ನೇ ಕಲಿಸುತ್ತಿದ್ದರು. ಅವರು ಪ್ರತಿಯೊಂದು ಹೊಸ ನೃತ್ಯ ಕಲಿಸುವಾಗ ಬಹಳ ಸುಂದರವಾಗಿ ಕಾಣುತ್ತಿತ್ತು. ಆದರೆ ಅದನ್ನು ನಾನು ಪ್ರಸ್ತುತಪಡಿಸಿದಾಗ ಅಷ್ಟೇನೂ ಚೆನ್ನಾಗಿ ಕಾಣ್ತಿರಲಿಲ್ಲ. ಅವರಂತೆಯೇ ಆಗಬೇಕಾದರೆ ನಾನು ಯಾವುದೋ